ಶ್ರೀ ಬಿ. ರಾಚಯ್ಯ.—ಕೆಲವು ಜನ ಹೈಕೋರ್ಟಿಗೆ ರಿಟ್ ಹಾಕಿಕೊಂಡ ಮೇಲೆ, ತಡೆ ಅಜ್ಞೆ ಕೊಟ್ಟಮೇಲೆ ಗೇಣಿದಾರರು ಲ್ಯಾಂಡ್ ರಿಫಾರಮ್ಸ್ ಆಕ್ಟ್‌ಕಲಂ 8ರ ಪ್ರಕಾರ ಮ್ಯಾಗ್ನಿಮುಮ್ ರೆಂಟ್ ಕೊಡುವುದಾದರೆ ಅವರು ತಮ್ಮ ಗೇಣಿಯನ್ನು ಮುಂದುವರಿಸಿಕೊಂಡು ಹೋಗಬಹುದು ಎಂದು ಸೂಚನೆ ಕೊಟ್ಟಿದ್ದೇವೆ.

ಶ್ರೀ ಎಸ್. ಗೋಪಾಲ ಗೌಡ.—ಹಿಂದೆ ಸರ್ಕಾರದವರು ಭೂಸುಧಾರಣಾ ಮಸೂದೆಯನ್ನು ಅಂಗೀಕಾರ ಮಾಡುವಾಗ ಮುಜರಾಯಿ ಜಮೀನುಗಳಿಗೆ ಪ್ರತ್ಯೇಕವಾದ ಕಾನೂನನ್ನು ತರುತ್ತೇವೆಂದು ಸರ್ಕಾರದವರು ಈ ಸಭೆಯಮುಂದೆ ಆಶ್ವಾಸನೆಯನ್ನು ಕೊಟ್ಟಿದ್ದಾರೆ. ಈಗ ಮುಜರಾಯಿ ಗೇಣಿ ಹಕ್ಕನ್ನು ಹರಾಜು ಮಾಡಲು ಅಧಿಕಾರಿಗಳು ಹರಾಜು ಕರೆದರೂ ಕೂಡ ಸರ್ಕಾರದವರು ಹರಾಜನ್ನು ನಿಲ್ಲಿಸಿ ಎಂದು ಹೇಳಲಿಲ್ಲ. ಈಗತಾನೆ ಮಾನ್ಯ ಮಂತ್ರಿಗಳು ಗೇಣಿದಾರರಿಗೆ ಅನ್ಯಾಯವಾಗುತ್ತಿರುವುದು ಗೊತ್ತಿದೆಯೇ ಎಂದು ಕೇಳಿದ್ದಕ್ಕೆ ಅದು ಗೊತ್ತಿಲ್ಲ ಎಂದು ಹೇಳಿದರು. ಈ ಪ್ರಶ್ನೆಗೆ ಅವರು ಕೊಟ್ಟ ಉತ್ತರಕ್ಕೆ ಉತ್ತರದಲ್ಲಿ ಗೇಣಿದಾರರಿಗೆ ಅನ್ಯಾಯವಾಗುತ್ತಿರುವುದು ನಿಜ ಎಂದು ಹೇಳಿದ್ದಾರೆ. ಅವರು ಕೊಟ್ಟ ಭರವಸೆಯನ್ನು ಉಳಿಸಿಕೊಳ್ಳುವುದಕ್ಕೆ ಮುಜರಾಯಿ ಜಮೀನು ಯಾವರೀತಿ ಕಾನೂನಿನಲ್ಲಿ ಬರಬೇಕು ಎನ್ನುವುದರ ಬಗ್ಗೆ ಏನಾದರೂ ಒಂದು ಕಾನೂನನ್ನುಸಿದ್ಧ ಮಾಡಿದ್ದಾರೆಯೆ, ಅದು ಯಾವಾಗ ಈಚೆಗೆ ಬರುತ್ತದೆ, ಅದುವರೆಗೂ ಏನಾದರೂ ಒಂದು ಆಜ್ಞೆಯನ್ನು ಕೊಟ್ಟು ರೈತರಿಗೆ ಆಗುವ ತೊಂದರೆಯನ್ನು ತಪ್ಪಿಸುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಬಿ. ರಾಚಯ್ಯ.—ಹಿಂದೆ ಕೊಟ್ಟಂಥ ಸೂಚನೆಯ ಪ್ರಕಾರ ಒಂದು ಕರಡು ಮಸೂದೆ ತಯಾರು ಮಾಡುತ್ತಾ ಇದ್ದೇವೆ.

Local Candidates in the Department of Statistics

*Q.—69. Sri K. H. RANGANATH (Mudigere).—

Will the Minister for Finance and Planning be pleased to state :—

(*a*) total number of persons working as local candidates in the Department of Statistics in the State and since when (districtwise list be furnished) ;

(*b*) whether the Government have received representations from the concerned persons of the Department to regularise their appointments in view of the prevailing Government Order ;

(*c*) if so, the steps taken by them in this behalf ;

(*d*) the total number of local candidates whose services have been regularised under the prevailing Government orders up-to-date (Districtwise list to be furnished) ?

A.—Sri RAMAKRISHNA HEGDE (Minister for Finance and Planning)—

(*a*)—

1	Head Office	...	155
2	Bangalore	...	11
3	Belgaum	...	5
4	Bijapur	...	16
5	Bidar	...	5
6	Bellary	...	8
7	Chickmagalur	...	7
8	Chitradurga	...	15
9	Coorg	...	6

10	Dharwar	...	20
11	Gulbarga	...	16
12	Hassan	...	6
13	Kolar	...	7
14	Mandya	...	19
15	Mysore	...	8
16	N. Kanara	...	5
17	S. Kanara	...	8
18	Raichur	...	9
19	Shimoga	...	3
20	Tumkur	...	9

Of these 111 were appointed on various dates prior to 1st January 1965. The rest were appointed on various dates later.

(*b*) Yes.

(*c*) Matter is under active consideration.

(*d*) Does not arise in view of (*c*) above.

ಶ್ರೀ ಕೆ. ಎಚ್. ರಂಗನಾಥ್.—ಅಪಾಯಿಂಟ್‌ಮೆಂಟ್ ರೆಗ್ಯುಲರೈಜ್ ಮಾಡಬೇಕೆಂದು ಸುಮಾರು ಎಷ್ಟು ವರ್ಷದಿಂದ ಅವರು ಸರಕಾರಕ್ಕೆ ರೆಪ್ರೆಜೆಂಟೇಷನ್ಸ್ ಕೊಡುತ್ತಾ ಇದ್ದಾರೆ ?

ಶ್ರೀ ರಾಮಕೃಷ್ಣ ಹೆಗಡೆ.—ಬಹಳ ವರ್ಷದಿಂದ ಏನೂ ಇಲ್ಲ, ಕೆಲವು ಕಾಲದಿಂದ ಬರುತ್ತಾ ಇವೆ.

ಶ್ರೀ ಕೆ. ಎಚ್. ರಂಗನಾಥ್.—1958 ರಿಂದ ಈಚೆಗೆ ಎಷ್ಟು ಜನರನ್ನು ರೆಗ್ಯುಲರೈಜ್ ಮಾಡಿದ್ದೀರಿ ?

ಶ್ರೀ ರಾಮಕೃಷ್ಣ ಹೆಗಡೆ.—1-1-1965ನೇ ಇಸವಿಯ ಒಳಗಡೆ ಅಪಾಯಿಂಟ್‌ಮೆಂಟ್ ಆದವರನ್ನು ರೆಗ್ಯುಲರೈಜ್ ಮಾಡುತ್ತೇವೆ. ಆ ನಂತರ ನೇಮಕವಾದವರು ಚೆಂಪರರಿಯಾಗಿ ಲೋಕಲ್ ಕ್ಯಾಂಡಿಡೇಟ್ಸ್ ಎಂದು ಆಗುತ್ತಾರೆ. ಅವರನ್ನು ರೆಗ್ಯುಲರೈಜ್ ಮಾಡುವುದು ಸಾಧ್ಯವಿಲ್ಲ. ಯಾಕೆಂದರೆ ಓಪನ್ ರಿಕ್ರೂಟಮೆಂಟ್ ಪಿ. ಎಸ್. ಸಿ. ಯಿಂದ ಮಾಡಬೇಕಾಗುತ್ತದೆ. 1-1-1965ರ ಒಳಗೆ ಅಪಾಯಿಂಟ್‌ಮೆಂಟ್ ಆದವರು ಎಷ್ಟು ಮತ್ತು ಆ ನಂತರ ಆದವರು ಎಷ್ಟು ಎಂಬುದನ್ನು ಉತ್ತರದಲ್ಲಿ ಕೊಟ್ಟಿದೆ. ಇದು ಸ್ಪಷ್ಟವಾಗಿದೆ.

ಶ್ರೀ ಕೆ. ಎಚ್. ರಂಗನಾಥ್.—ಮುಂಚೆ ಅಪಾಯಿಂಟ್‌ಮೆಂಟ್ ಆದವರನ್ನು ರೆಗ್ಯುಲರೈಸ್ ಮಾಡಿದ್ದೀರಾ ?

ಶ್ರೀ ರಾಮಕೃಷ್ಣ ಹೆಗಡೆ.—ಈ ವಿಚಾರ ಸರಕಾರದ ಗಮನದಲ್ಲಿದೆ. ಇನ್ನೊಂದು ತಿಂಗಳಿನಲ್ಲಿ ಅಂದರೆ, ಜುಲೈ ತಿಂಗಳ ಕೊನೆಯ ಒಳಗಾಗಿ ರೆಗ್ಯುಲರೈಜ್ ಆಗುತ್ತದೆ.

ಶ್ರೀ ಎಲ್. ಶ್ರೀಕಂಠಯ್ಯ.—ಈ ಅಂಕಿಸಂಖ್ಯೆಗಳ ಡೈರೆಕ್ಟರ್ ಯಾರು ? ಅವರು ಇದಕ್ಕೆ ಬೇಕಾದ ಅರ್ಹತೆ ಪಡೆದಿದ್ದಾರೆಯೇ ? ಅಂದರೆ ಸೆಕ್ರೆಟರಿಯವರು ಡೈರೆಕ್ಟರ್ ಆಫ್ ಸ್ಟಾಟಿಸ್ಟಿಕ್ಸ್ ಆಗಿದ್ದಾರೆಯೇ ?

ಶ್ರೀ ರಾಮಕೃಷ್ಣ ಹೆಗಡೆ.—ಅವರು ಅರ್ಹತೆ ಪಡೆದಿದ್ದು ಫುಲ್ ಟೈಂ ಕೆಲಸ ಮಾಡುವವರು ಆಗಿದ್ದಾರೆ.

Khist amount due from Excise Contractors

*Q.—105. Sri N. CHIKKE GOWDA (Hoskote).—

Will the Minister for Finance and Planning be pleased to state :—

(*a*) the khist amount due to Government so far from the Excise Contractors (Talukwise and yearwise information may please be furnished);

(*b*) the steps taken to collect the arrears ?